# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 1307

ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ

(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 19-03-2025

| | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಎಲೆಕ್ಟ್ರಿಕಲ್ ಆಟೋ ರಿಕ್ಷಾಗಳು ರಾಜ್ಯಾದ್ಯಂತ ಸಂಚರಿಸುತ್ತಿದ್ದು, ಆಟೋ ರಿಕ್ಷಾಗಳಿಗೆ ಪರ್ಮಿಟ್ ಮತ್ತು ನಿಗಧಿತ ಸ್ಥಳ ಗುರುತು ಪಡಿಸದೇ ಇರುವುದರಿಂದ ನಗರ ಸಂಚಾರಿ ವ್ಯವಸ್ಥೆಯಲ್ಲಿ ಗೊಂದಲ ಉಂಟಾಗಿರುವುದನ್ನು ಸರಿಪಡಿಸಲು ಕೈಗೊಂಡ ಕ್ರಮವೇನು; | ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 2 ಟಿಡಿಒ 2019, ದಿನಾಂಕ:20.01.2022 ರಲ್ಲಿ ಬ್ಯಾಟರಿ ಚಾಲಿತ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಕೆಯ ಸಾರಿಗೆ ವಾಹನಗಳಿಗೆ ಪರ್ಮಿಟ್ ವಿನಾಯತಿ ನೀಡಲಾಗಿರುವುದರಿಂದ ರಾಜ್ಯದಲ್ಲಿ ಎಲೆಕ್ಟ್ರಿಕ್ ಆಟೋ ರಿಕ್ಷಾಗಳಿಗೆ ಯಾವುದೇ ಪರ್ಮಿಟ್ ನೀಡಿರುವುದಿಲ್ಲ.<br><br>ಮುಂದುವರೆದು, ಮೋಟಾರು ವಾಹನಗಳ ಕಾಯ್ದೆ 1988ರ, ಕಲಂ 66(3)(ಎನ್) ಮತ್ತು ಸದರಿ ಕಾಯ್ದೆ ಕಲಂ 96(xxxiii) ರಲ್ಲಿ ಪ್ರದತ್ತವಾದ ಅಧಿಕಾರದಡಿ ಬ್ಯಾಟರಿ ಚಾಲಿತ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಸಿ ಸಂಚರಿಸುವ ಎಲ್ಲಾ ಸಾರಿಗೆ ವಾಹನಗಳಿಗೆ ಸಂಬಂಧಪಟ್ಟ ರಹದಾರಿಯನ್ನು ಶುಲ್ಕ ರಹಿತವಾಗಿ ಮಂಜೂರು ಮಾಡುವ ಕುರಿತು ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.<br><br>ಸಂಚಾರ ಪೊಲೀಸ್ ವಿಭಾಗವು ಸಾರ್ವಜನಿಕರ ಸುಗಮ ಸಂಚಾರವನ್ನು ಕೈಗೊಳ್ಳಲು ಪ್ರಾಥಮಿಕ ಅದ್ಯತೆಯನ್ನು ನೀಡಿ ಕರ್ತವ್ಯ ನಿರ್ವಹಿಸುತ್ತಿರುತ್ತದೆ. |

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಆ)</td><td>ಅನುಮತಿ ಪಡೆದು ರಿಕ್ಷಾ ಚಾಲನೆ ಮಾಡುವ ಚಾಲಕರಿಗೆ ಇರುವ ಸಂಚಾರಿ ನಿಯಮಗಳು ಎಲೆಕ್ಟ್ರಿಕಲ್ ಆಟೋ ರಿಕ್ಷಾಗಳಿಗೆ ಅನ್ವಯ ಆಗುವುದಿಲ್ಲವೇ; ಇದ್ದಲ್ಲಿ ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮವೇನು; (ವಿವರ ನೀಡುವುದು)</td><td>ಅನುಮತಿ ಪಡೆದು ರಿಕ್ಷಾ ಚಾಲನೆ ಮಾಡುವ ಚಾಲಕರಿಗೆ ಇರುವ ಸಂಚಾರಿ ನಿಯಮಗಳು ಎಲೆಕ್ಟ್ರಿಕ್ ಆಟೋ ರಿಕ್ಷಾಗಳಿಗೂ ಅನ್ವಯಿಸುತ್ತದೆ.</td></tr>
<tr><td>ಇ)</td><td>ಮಂಗಳೂರು ನಗರದಲ್ಲಿ ಇರುವ ರಿಕ್ಷಾಗಳ ಸಂಖ್ಯೆ ಎಷ್ಟು; ಪರ್ಮಿಟ್‌ಗಳನ್ನು ನೀಡಲಾಗಿರುವ ಸಂಖ್ಯೆ ಎಷ್ಟು; ಯಾವ ಯಾವ ಉದ್ದೇಶಕ್ಕಾಗಿ ನೀಡಲಾಗಿದೆ; (ವಿವರ ನೀಡುವುದು)</td><td>ಮಂಗಳೂರು ನಗರದಲ್ಲಿ ಎಲೆಕ್ಟ್ರಿಕ್ ಆಟೋರಿಕ್ಷಾ ಒಳಗೊಂಡಂತೆ ಇಲ್ಲಿಯವರೆಗೆ ಒಟ್ಟು 8752 ರಿಕ್ಷಾಗಳು ನೋಂದಣಿಯಾಗಿರುತ್ತವೆ. ಅದರಲ್ಲಿ ಎಲೆಕ್ಟ್ರಿಕ್ ಆಟೋರಿಕ್ಷಾ ಹೊರತುಪಡಿಸಿ ಒಟ್ಟು 6949 ಪರ್ಮಿಟ್‌ಗಳನ್ನು ನೀಡಲಾಗಿರುತ್ತದೆ. ಸಾರ್ವಜನಿಕರು ಹಾಗೂ ಪ್ರಯಾಣಿಕರನ್ನು ನಗರದಲ್ಲಿ ಕರೆದೊಯ್ಯುವ ಉದ್ದೇಶಕ್ಕಾಗಿ ನೀಡಲಾಗಿರುತ್ತದೆ.</td></tr>
<tr><td>ಈ)</td><td>2022-23; 2023-24 ಮತ್ತು 2024-25ನೇ ಸಾಲಿನಲ್ಲಿ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಒಳಗಡೆ ನೋಂದಾವಣೆಗೊಂಡ ರಿಕ್ಷಾಗಳ ಸಂಖ್ಯೆ ಎಷ್ಟು; ಯಾವ ಪರ್ಮಿಟ್ ನೀಡಲಾಗಿದೆ; ಇದರಲ್ಲಿ ಎಲೆಕ್ಟ್ರಿಕಲ್ ಆಟೋ ರಿಕ್ಷಾಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)</td><td>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಲೆಕ್ಟ್ರಿಕ್ ರಿಕ್ಷಾಗಳನ್ನು ಒಳಗೊಂಡಂತೆ ನೋಂದಣಿಯಾಗಿರುವ ರಿಕ್ಷಾಗಳ ಸಂಖ್ಯೆ ಈ ಕೆಳಕಂಡಂತಿದೆ:-
<table>
<tr><th>ವರ್ಷ</th><th>ಪೆಟ್ರೋಲ್/ ಸಿ.ಎನ್.ಜಿ</th><th>ಎಲೆಕ್ಟ್ರಿಕ್</th></tr>
<tr><td>2022-23</td><td>1292</td><td>388</td></tr>
<tr><td>2023-24</td><td>1414</td><td>255</td></tr>
<tr><td>2024-25</td><td>1394</td><td>1160</td></tr>
<tr><td>ಒಟ್ಟು</td><td>4100</td><td>1803</td></tr>
</table>
ಮೋಟಾರು ವಾಹನಗಳ ಕಾಯ್ದೆ 1988ರ ಕಲಂ, 74ರನ್ವಯ ಒಪ್ಪಂದ ರಹದಾರಿಗಳನ್ನು (Contract Carriage) ಪೆಟ್ರೋಲ್ / ಸಿ.ಎನ್.ಜಿ ಆಟೋರಿಕ್ಷಾಗಳಿಗೆ ನೀಡಲಾಗಿರುತ್ತದೆ. ಮುಂದುವರೆದು, ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 2 ಟಿಡಿಒ 2019, ದಿನಾಂಕ:20.01.2022 ರಲ್ಲಿ ಬ್ಯಾಟರಿ</td></tr>
</table>

| | ಪ್ರಶ್ನೆ | ಉತ್ತರ |
|---|---|---|
| | | ಚಾಲಿತ, ಮೆಥನಾಲ್ ಮತ್ತು ಈತನಾಲ್ ಇಂಧನ ಬಳಕೆಯ ಸಾರಿಗೆ ವಾಹನಗಳಿಗೆ ಪರ್ಮಿಟ್ ವಿನಾಯತಿ ನೀಡಿರುವುದರಿಂದ ಎಲೆಕ್ಟ್ರಿಕ್ ಆಟೋ ರಿಕ್ಷಾಗಳಿಗೆ ಯಾವುದೇ ಪರ್ಮಿಟ್ ನೀಡಿರುವುದಿಲ್ಲ. |
| ಊ | ರಾಜ್ಯಮಟ್ಟದಲ್ಲಿ ಎಲೆಕ್ಟ್ರಿಕಲ್ ಆಟೋ ರಿಕ್ಷಾಗಳ ಸಂಚಾರಿ ಮತ್ತು ಮೋಟಾರು ವಾಹನ ಕಾಯ್ದೆಯಡಿ ತರಲು ಇಲಾಖೆ ಮುಂದಿರುವ ಕ್ರಮವೇನು; ಸರ್ಕಾರಕ್ಕೆ ಪಾವತಿ ಮಾಡುವ ಪರ್ಮಿಟ್ ಮತ್ತು ಇತರ ವೆಚ್ಚಗಳು ಎಷ್ಟು; (ವಿವರ ನೀಡುವುದು) | ಮೋಟಾರು ವಾಹನಗಳ ಕಾಯ್ದೆ 1988ರ, ಕಲಂ 66 (3) (ಎನ್) ಮತ್ತು ಸದರಿ ಕಾಯ್ದೆ ಕಲಂ 96 (xxxiii)ರಲ್ಲಿ ಪ್ರದತ್ತವಾದ ಅಧಿಕಾರದಡಿ ಬ್ಯಾಟರಿ ಚಾಲಿತ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಸಿ ಸಂಚರಿಸುವ ಎಲ್ಲಾ ಸಾರಿಗೆ ವಾಹನಗಳಿಗೆ ಸಂಬಂಧಪಟ್ಟ ರಹದಾರಿಯನ್ನು ಶುಲ್ಕ ರಹಿತವಾಗಿ ಮಂಜೂರು ಮಾಡುವ ಕುರಿತ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br>ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ: S.O 5333 (E), ದಿನಾಂಕ:18-10-2018ರಲ್ಲಿ ಮೋಟಾರು ವಾಹನಗಳ ಕಾಯ್ದೆ 1988ರ, ಕಲಂ 66 (3)(ಎನ್)ರಲ್ಲಿ ಪ್ರದತ್ತವಾದ ಅಧಿಕಾರಡಿ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಸಿ ಸಂಚರಿಸುವ ಸಾರಿಗೆ ವಾಹನಗಳು ಹಾಗೂ ಬ್ಯಾಟರಿ ಆಧಾರಿತ ವಾಹನಗಳಿಗೆ ಸದರಿ ಕಾಯ್ದೆ ಕಲಂ 66 (1)ರಂತೆ ರಹದಾರಿಯಿಂದ ವಿನಾಯತಿ ನೀಡಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಅದರಂತೆ, ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 2 ಟಿಡಿಓ 2019, ದಿನಾಂಕ:20-01-2022 ರಲ್ಲಿ ಮೋಟಾರು ವಾಹನಗಳ ಕಾಯ್ದೆ 1988ರ, ಕಲಂ 66(3)(ಎನ್)ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಬ್ಯಾಟರಿ ಚಾಲಿತ, ಮೆಥನಾಲ್ ಮತ್ತು ಇಥನಾಲ್ ಇಂಧನ ಬಳಕೆಯ ಸಾರಿಗೆ ವಾಹನಗಳಿಗೆ ಸದರಿ ಕಾಯ್ದೆ ಕಲಂ 66 (1) ರಹದಾರಿ ವಿನಾಯತಿ ನೀಡಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಆದುದರಿಂದ ಸರ್ಕಾರಕ್ಕೆ ಪಾವತಿ ಮಾಡುವ ಪರ್ಮಿಟ್ ಮತ್ತು ಇತರೆ ವೆಚ್ಚಗಳು ಇರುವುದಿಲ್ಲ. |

| | ಪ್ರಶ್ನೆ | ಉತ್ತರ |
|---|---|---|
| ಊ | ಎಲೆಕ್ಟ್ರಿಕಲ್ ಆಟೋ ರಿಕ್ಷಾಗಳ ನೋಂದಾವಣೆ ಮತ್ತು ಚಾಲನೆ ಮಾಡಲು ಲೈಸೆನ್ಸ್ ಅವಶ್ಯಕತೆ ಇದೆಯೇ; ಎಲೆಕ್ಟ್ರಿಕಲ್ ಆಟೋ ರಿಕ್ಷಾಗಳು ಸಂಚರಿಸಲು ಇರುವ ನಿಯಮಗಳೇನು? (ವಿವರ ನೀಡುವುದು) | ಹೌದು, ಎಲೆಕ್ಟ್ರಿಕ್ ಆಟೋ ರಿಕ್ಷಾಗಳ ನೋಂದಾವಣೆ ಮತ್ತು ಚಾಲನೆ ಮಾಡಲು ಲೈಸೆನ್ಸ್ ಅವಶ್ಯಕತೆ ಇರುತ್ತದೆ.<br>ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ, ಪರ್ಯಕ್ರಮ-II ರನ್ವಯ ಲಘು ಮೋಟಾರು ವಾಹನದ ಚಾಲನಾ ಪರವಾನಗಿಯನ್ನು ಪಡೆದುಕೊಂಡು ಎಲೆಕ್ಟ್ರಿಕಲ್ ಆಟೋ ರಿಕ್ಷಾಗಳನ್ನು ಮೋಟಾರು ವಾಹನಗಳ ಕಾಯ್ದೆ ಮತ್ತು ಅದರಡಿ ರಚಿತವಾದ ನಿಯಮಗಳನ್ವಯ ಸಂಚರಿಸಬಹುದಾಗಿರುತ್ತದೆ. |

**ಸಂಖ್ಯೆ: ಟಿಡಿ 28 ಟಿಡಿಕ್ಯೂ 2025**

**(ರಾಮಲಿಂಗಾರೆಡ್ಡಿ)**

ಸಾರಿಗೆ ಮತ್ತು ಮುಜರಾಯಿ ಸಚಿವರು.